# ಆಯೆಷಾ ಅಧರ ಪುರಾಣ



ಮೂಗು, ಗಲ್ಲ, ತುಟಿ ತಮ್ಮ ಮುಖದ ಆಕಾರಕ್ಕೆ ಹೋಲಿಕೆಯಾಗುತ್ತಿಲ್ಲ ಎಂಬ ಭಾವನೆ ಮೂಡಿದರೆ ಅದಕ್ಕೆ ಕತ್ತರಿ ಪ್ರಯೋಗ ಮಾಡಿಸಲು ಹಿಂದೇಟು ಹಾಕದ ನಟಿಯರ ಸಂಖ್ಯೆ ದೊಡ್ಡದಿದೆ. ಇತ್ತೀಚೆಗೆ ಅನುಷ್ಕಾ ಶರ್ಮಾ ತುಟಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿದ್ದು ಸುದ್ದಿಯಾಗಿತ್ತು. ತಾನು 'ಬಾಂಬೆ ವೆಲ್ವೆಟ್' ಚಿತ್ರದ ಪಾತ್ರಕ್ಕಾಗಿ ತುಟಿ ಆಕಾರ ಬದಲಿಸಿಕೊಂಡೆ. ಹಾಗೆಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿಲ್ಲ ಎಂದು ಅನುಷ್ಕಾ ಸಮಜಾಯಿಷಿ ನೀಡಿದ್ದಳು. ಈಗ ಮಾಜಿ ನಟಿ ಆಯೆಷಾ ಟಕಿಯಾ ಸರದಿ. ಆಯೆಷಾ ಬಾಲಿವುಡ್‌ನ ಬಣ್ಣದ ಲೋಕದಿಂದ ದೂರವುಳಿದು ಏಳೆಂಟು ವರ್ಷವೇ ಕಳೆದಿದೆ. 2004ರಲ್ಲಿ 'ಟಾರ್ಜಾನ್: ದಿ ವಂಡರ್ ಕಾರ್' ಆಕೆ ನಟಿಸಿದ ಮೊದಲ ಚಿತ್ರ. ಬಳಿಕ 'ದೋರ್', 'ವಾಂಟೆಡ್', 'ಸಲಾಂ–ಎ–ಇಷ್ಕ್', 'ಪಾಠ್‌ಶಾಲಾ' ಮುಂತಾದ ಚಿತ್ರಗಳಲ್ಲಿ ಆಕೆಯ ನಟನೆ ಮೆಚ್ಚುಗೆ ಪಡೆದಿತ್ತು. ಬಾಲಿವುಡ್‌ನಲ್ಲಿ ಏರುಗತಿಯ ಓಟದಲ್ಲಿಯೇ ಸಾಗುತ್ತಿದ್ದ ಆಕೆ, ಇದ್ದಕ್ಕಿದ್ದಂತೆ ಸಿನಿಮಾ ಜಗತ್ತಿಗೆ ಬೆನ್ನು ತೋರಿಸಲು ಕಾರಣ ಮದುವೆ. 2009ರಲ್ಲಿ ರಾಜಕಾರಣಿಯ ಮಗನೊಂದಿಗೆ ಸಂಸಾರದ ಹೊಸ್ತಿಲು ದಾಟಿದ ಆಯೆಷಾ ಮತ್ತೆ ಸಿನಿಮಾದತ್ತ ಮುಖಮಾಡಿರಲಿಲ್ಲ. ಈಗ ಆಕೆ ಸುದ್ದಿಗೆ ಬರಲು ಕಾರಣ ಆಕೆಯ ತುಟಿ. ಮುಂಬೈನಲ್ಲಿ ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಆಯೆಷಾ ಭಾಗವಹಿಸಿದ್ದ ಚಿತ್ರವೊಂದು ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರಲ್ಲಿ ಆಕೆಯ ತುಟಿ ಹಿಂದೆ ಇದ್ದ ಆಕಾರವನ್ನು ಕಳೆದುಕೊಂಡು ದಪ್ಪಗಾಗಿದೆ. ಆಕೆ ತುಟಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾಳೆ ಎಂಬ ಮಾತುಗಳು ಕೇಳಿಬರುತ್ತಿವೆ. ಉಬ್ಬಿದ ಅಧರದ ಆಯೆಷಾಳನ್ನು ಲೇವಡಿ ಮಾಡುವ ಮೀಮ್‌ಗಳು ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ, ಆಯೆಷಾ ಅದು ವಿಕೃತಗೊಳಿಸಲಾಗಿರುವ ಚಿತ್ರ ಎಂದು ಜಾಲತಾಣಿಗರ ಮೇಲೆ ಕಿಡಿಕಾರಿದ್ದಾಳೆ.

'ನಾನು ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯಳಾಗಿದ್ದೇನೆ. ಆಗಾಗ್ಗೆ ನನ್ನ ಫೋಟೊಗಳನ್ನು ಅದರಲ್ಲಿ ಹಾಕುತ್ತಿರುತ್ತೇನೆ. ನನ್ನ ನೈಜ ಚಿತ್ರವನ್ನು ಅಲ್ಲಿಯೇ ನೋಡಬಹುದು. ಸುಳ್ಳು ರೂಮರ್‌ಗಳನ್ನು ಹಬ್ಬಿಸುವವರನ್ನು ನಾನು ದ್ವೇಷಿಸುತ್ತೇನೆ' ಎಂದು ಆಕೆ ಇನ್‌ಸ್ಟಾಗ್ರಾಂನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾಳೆ.

# ಪಲ್ಲವಿಯ ವಿವೇಕ!

ಬಾಲಿವುಡ್‌ನಲ್ಲಿನ ತರತಮಗಳ ಕುರಿತು ಆಗಾಗ್ಗೆ ಅಲ್ಲಿನ ಮಂದಿ ಮಾತನಾಡುತ್ತಿರುತ್ತಾರೆ. ಅಲ್ಲಿ ಲಿಂಗ, ವರ್ಗ ತಾರತಮ್ಯಗಳಿಗಿಂತಲೂ ಹೆಚ್ಚಿರುವುದು ಪ್ರಾದೇಶಿಕ ತಾರತಮ್ಯ ಎಂಬ ಆರೋಪ. ಹಿಂದಿ ಭಾಷಿಕರನ್ನು ಹೊರತುಪಡಿಸಿ ಬೇರೆ ರಾಜ್ಯದಿಂದ ಬಂದವರು ಅಲ್ಲಿಗೆ ಹೊರಗಿನವರೇ. ಸೂಕ್ತ ಮನ್ನಣೆ, ಗೌರವ, ಅವಕಾಶ ದೊರಕದಿರುವ ಬಗ್ಗೆ ಆಗೀಗ ಕೆಲವು ನಟ ನಟಿಯರು ದನಿ ಎತ್ತುತ್ತಿರುತ್ತಾರೆ. 'ನನಗೆ ಹೊರಗಿನವಳು ಎಂದೆನಿಸಿಲ್ಲ' ಎಂದೂ ಕೆಲವರು ಹೇಳಿಕೊಳ್ಳುತ್ತಾರೆ. ಹೊರಗಿನವರು ಎಂಬ ಭಾವನೆ ಢಾಳಾಗಿ ಮೂಡುವಂತಾದಾಗ ನಟಿಯರು ಮುನ್ನುಗ್ಗಬೇಕು ಎನ್ನುವುದು ಪಲ್ಲವಿ ಶಾರದಾಳ ಅಭಿಪ್ರಾಯ. ಆದರೆ ಈ ಆಕ್ರಮಣಶೀಲತೆ ಅವರವರ ಆಯ್ಕೆಗೆ ಬಿಟ್ಟಿದ್ದು ಎಂದೂ ಆಕೆ ಹೇಳುತ್ತಾಳೆ. ಬಾಲಿವುಡ್‌ನ ಹೊರಗಿನ ಸಿನಿಲೋಕದಿಂದ ಬಂದವರು ಆಶಾವಾದ ಮತ್ತು ಗೆಲ್ಲಲಾರೆವೆಂಬ ಭಯದ ನಡುವೆ ತೊಳಲಾಡುತ್ತಿರುತ್ತಾರೆ. ಅದರ ಮಧ್ಯೆ ನನ್ನ ತಲೆ ಮತ್ತು ಹೆಗಲನ್ನೇರಿಸಿಕೊಂಡು ಸಾಗುವುದು ಮತ್ತು ಅವುಗಳಿಗೂ ಮೀರಿ ವಿವೇಕದಿಂದ ಹಾಗೂ ಮನುಷ್ಯಜೀವಿಯಾಗಿ ನಡೆದುಕೊಳ್ಳುವುದೇ ನನಗೆ ಮುಖ್ಯ ಎಂದು ಪಲ್ಲವಿ ಹೇಳಿಕೊಂಡಿದ್ದಾಳೆ. ಉದ್ಯಮದಲ್ಲಿ ಮಾರ್ಗದರ್ಶಕರು ಅಥವಾ ಸಲಹೆಗಾರರು ಇಲ್ಲದಿರುವಾಗ ಜಾಗರೂಕತೆಯಿಂದ ಸಿನಿಮಾಗಳ ಆಯ್ಕೆ ಮಾಡಿಕೊಳ್ಳಬೇಕು. ಹೀಗಾಗಿ ಕೆಲಸ ಸೃಷ್ಟಿಸುವಂತಹ ಕೆಲಸಗಳನ್ನೇ ಮಾಡುವಂತೆ ನಮ್ಮ ಆಯ್ಕೆ ಇರಬೇಕು ಎನ್ನುವುದು ಆಕೆಯ ಮಾತು. ಗಾಡ್‌ಫಾದರ್ ಇಲ್ಲದೆಯೇ ಬೆಳೆಯಲು ಸಾಧ್ಯ ಎಂಬುದನ್ನು ಆಕೆ ಕಂಡುಕೊಂಡಿದ್ದಾಳಂತೆ.

ಕರಣ್ ಜೋಹರ್‌ನ 'ಮೈ ನೇಮ್ ಈಸ್ ಖಾನ್' ಚಿತ್ರದಲ್ಲಿ ಪುಟ್ಟ ಪಾತ್ರದಲ್ಲಿ ನಟಿಸಿದ್ದ ಆಕೆ ನಾಯಕಿಯಾಗಿ ಪದಾರ್ಪಣೆ ಮಾಡಿದ್ದು 'ದಸ್ ತೋಲಾ' ಚಿತ್ರದಲ್ಲಿ. 'ಬೇಷರಮ್', 'ಹವಾಯ್‌ಜಾದೇ' ಸಿನಿಮಾಗಳು ಆಕೆಗೆ ಐಡೆಂಟಿಟಿ ತಂದುಕೊಟ್ಟಿವೆ. ಈ ಬಾರಿ ಆಸ್ಕರ್‌ನ ವಿವಿಧ ವಿಭಾಗಗಳಿಗೆ ನಾಮನಿರ್ದೇಶನಗೊಂಡಿದ್ದ 'ಲಿಯಾನ್' ಚಿತ್ರದಲ್ಲಿಯೂ ಪಲ್ಲವಿ ನಟಿಸಿದ್ದಾಳೆ. ಪಶ್ಚಿಮ ದಿಕ್ಕಿನ ಸಿನಿಮಾರಂಗಗಳು ಕಥಾ ವಸ್ತುವಿಗೆ ಆದ್ಯತೆ ನೀಡುತ್ತಿವೆ. ಆ ಕೆಲಸ ಬಾಲಿವುಡ್‌ನಲ್ಲಿ ಆಗುತ್ತಿಲ್ಲ ಎಂದು ಆಕೆಗೆ ಅನಿಸಿದೆ.

■ ಅಮಿ

